ವಿಶ್ವವಾಣಿ

ಸಂಪಾದಕೀಯ

ಬೇರು- ಚಿಗುರಿನ ಮಿಶ್ರಣ ಅಗತ್ಯ

ಕರ್ನಾಟಕದಲ್ಲಿ 135 ಸ್ಥಾನಗಳ ಬಹುಮತದೊಂದಿಗೆ ಅಧಿಕಾರದ ಗದ್ದುಗೆ ಏರಿರುವ ಕಾಂಗ್ರೆಸ್ ಇದೀಗ ಸಂಪುಟ ವಿಸ್ತರಣೆಯ ಕಸರತ್ತು ಪೂರ್ಣಗೊಳಿಸಿಕೊಂಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಡಿಸಿಎಂ ಸೇರಿ ಎಂಟು ಜನ ಸಂಪುಟಕ್ಕೆ ಸೇರಿದ್ದರು. ಇದೀಗ ಶನಿವಾರ ಮತ್ತೆ 24 ಜನರನ್ನು ಸಂಪುಟಕ್ಕೆ ಸೇರಿಸಿಕೊಳ್ಳುವ ಮೂಲಕ ಸಚಿವ ಸಂಪುಟವನ್ನು ಭರ್ತಿ ಮಾಡಿಕೊಳ್ಳುತ್ತಿದೆ. ಆದರೆ ಈ ಬಾರಿಯ ಸಂಪುಟ ವಿಸ್ತರಣೆಯಲ್ಲಿ ಕಾಂಗ್ರೆಸ್‌ನ ಕಾಯಂ ಸಚಿವರನ್ನು ಕೈಬಿಟ್ಟು ಹೊಸಬರಿಗೆ ಅವಕಾಶ ನೀಡುವ ಲೆಕ್ಕಾಚಾರದಲ್ಲಿ ಪಟ್ಟಿಯನ್ನು ಹೈಕಮಾಂಡ್ ಸಿದ್ಧಪಡಿಸಿದೆ ಎನ್ನುವ ಮಾತುಗಳು ಕಾಂಗ್ರೆಸ್ ವಲಯದಲ್ಲಿ ಕೇಳಿಬರುತ್ತಿದೆ. ಪ್ರಮುಖವಾಗಿ ಆರು ಬಾರಿ ಸಚಿವರಾಗಿರುವ, ಒಂಬತ್ತು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಆರ್.ವಿ. ದೇಶಪಾಂಡೆ, ನಾಲ್ಕು ಬಾರಿ ಸಚಿವರಾಗಿರುವ ಎಚ್.ಕೆ. ಪಾಟೀಲ್, ಎರಡು ಬಾರಿ ಸಚಿವರಾಗಿರುವ ಟಿ.ಬಿ. ಜಯಚಂದ್ರ ಸೇರಿದಂತೆ 2028ರ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎನ್ನುವ ಮಾತನ್ನು ಹೇಳಿರುವ ಹಿರಿಯರಿಗೆ ಸಚಿವ ಸ್ಥಾನ ನೀಡದಿರಲು ತೀರ್ಮಾನಿಸಿದೆ. ಈ ರೀತಿ ಹಿರಿಯರನ್ನು ಕೈಬಿಡಲು ಪ್ರಮುಖವಾಗಿ, ಸರಕಾರದಲ್ಲಿ ಹೊಸ ಆಲೋಚನೆಗಳಿಗೆ ಅವಕಾಶ ಸಿಗಲಿ ಹಾಗೂ ಮುಂದಿನ ದಿನದಲ್ಲಿ ಪಕ್ಷದ ಸಂಘಟನೆಯಲ್ಲಿ ಹೊಸ ಉತ್ಸಾಹ ನೀಡಬೇಕು ಎನ್ನುವ ಕಾರಣಕ್ಕೆ ಈ ತೀರ್ಮಾನಕ್ಕೆ ಬರಲಾಗಿದೆ. ಹಾಗೆಂದು ಹಿರಿಯವರಿಗೆ ಅವಕಾಶವೇ ಇಲ್ಲ ಎಂದಿಲ್ಲ. ಈಗಾಗಲೇ ಪ್ರಮಾಣವಚನ ಸ್ವೀಕರಿಸಿರುವ ಡಿಸಿಎಂ ಡಿ.ಕೆ. ಶಿವಕುಮಾರ್, ರಾಮಲಿಂಗಾರೆಡ್ಡಿ, ಡಾ.ಜಿ. ಪರಮೇಶ್ವರ್, ಕೆ.ಎಚ್. ಮುನಿಯಪ್ಪ, ಕೆ.ಜೆ. ಜಾರ್ಜ್ ಅವರಿಗೆ ವಿವಿಧ ಇಲಾಖೆಯಲ್ಲಿ ಸಚಿವರಾಗಿ ನಿರ್ವಹಿಸಿರುವ ಅನುಭವವಿದೆ. ಈ ಮೂಲಕ ಅನುಭವದೊಂದಿಗೆ ಹೊಸ ಆಲೋಚನೆಗಳಿಗೆ ಅವಕಾಶ ನೀಡುವ ನಿಟ್ಟಿನಲ್ಲಿ ಸಮತೋಲಿತ ಸಂಪುಟವನ್ನು ಸಿದ್ಧಪಡಿಸಿರುವಂತಿದೆ. ಒಂದು ರೀತಿಯಲ್ಲಿ ಸರಕಾರ ಬಂದಾಗಲೆಲ್ಲ ಅವರವರೇ ಸಚಿವರಾಗಿ ಏಕತಾನತೆ ಇರುವ ಬದಲು ಹೊಸಬರಿಗೆ ಅವಕಾಶ ನೀಡುವ ಮೂಲಕ, ಬದಲಾವಣೆಗೆ ಅವಕಾಶ ನೀಡುವುದು ಸೂಕ್ತ ನಿರ್ಧಾರ. ಆದರೆ ಈ ರೀತಿ ಹಿರಿಯರನ್ನು ಕಡೆಗಣಿಸಿದಾಗ, ಅವರು ಯಾವ ರೀತಿ ಪ್ರತಿಕ್ರಿಯಿಸುತ್ತಾರೆ? ಅದನ್ನು ಸಿದ್ದರಾಮಯ್ಯ ಹಾಗೂ ಪಕ್ಷದ ಹೈಕಮಾಂಡ್ ಹೇಗೆ ನಿಭಾಯಿಸುತ್ತದೆ ಎನ್ನುವುದನ್ನು ಕಾದು ನೋಡಬೇಕಿದೆ.

ಸೊಂಪಾದಕೀಯ

ಜನನ ಮರಣಗಳೆರಡೂ ಕುರುಡು

ಒಂದು ಹಳೇ ಜೋಕಿದೆ. ಎಲೆಕ್ಷನ್ನಲ್ಲಿ ಓಟಾಕೋಕೆ ಅಂತ ಬಂದ ಸಿದ್ದಪ್ಪ, ಅಲ್ಲಿದ್ದವರನ್ನ ನನ್ ಹೆಂಡ್ತಿನೇನಾದ್ರೂ ನೋಡಿದ್ರಾ? ಅಂತ ಕೇಳಿದ್ನಂತೆ. ಅದಕ್ಕೆ ಅವನ ಬಗ್ಗೆ ಗೊತ್ತಿದ್ದ ಊರವರು, ಅಲ್ಲ ಸಿದ್ದಪ್ಪ, ನಿನ್ ಹೆಂಡ್ತಿ ತೀರಿಕೊಂಡು ಹತ್ತು ವರ್ಷ ಆಯ್ತು, ಆದ್ರೂ ನೀನು ಹಿಂಗೆ ಎಲೆಕ್ಷನ್ ಟೈಮಲ್ಲಿ ಮಾತ್ರ ನನ್ ಹೆಂಡ್ತಿನ್ ನೋಡಿದ್ರಾ, ಅಂತ ಕೇಳ್ತಾ ಇರ್ತೀಯಲ್ಲ, ನಿಂಗೇನ್ ಮಳ್ಳಾ? ಅಂತ ಕೇಳಿದ್ರು. ಅದಕ್ಕೆ ಸಿದ್ದಪ್ಪ ಹೇಳ್ದ, ಇಲ್ಲ ಕಣ್ರಪ್ಪಾ, ನನ್ ಹೆಂಡ್ತಿ ಹತ್ತು ವರ್ಷ ಮುಂಚೇನೇ ಸತ್ತೋಗಿ ರೋದೇನೋ ನಿಜ, ಆದ್ರೆ ಆವಾಗಿಂದ ಪ್ರತಿಸಲ ಎಲೆಕ್ಷನ್ ಟೈಮಿಗೆ ಮಾತ್ರ ಸರಿಯಾಗಿ ಬಂದು ನನಗಿಂತ ಮುಂಚೇನೇ ಓಟು ಹಾಕಿ ಹೋಗಿರ್ತಾಳೆ, ಅದಕ್ಕೇ ಕೇಳ್ತೀನಿ ಅಂದ್ನಂತೆ. ಇದು ನಮ್ಮ ದೇಶದಲ್ಲಿ ಸತ್ತವರ ಹೆಸರಲ್ಲಿ ನಕಲಿ ಓಟು ಹಾಕುವ ದಂಧೆಯ ಬಗ್ಗೆ ಇರೋ ಜೋಕು. ಇಂಥ ಆಟಗಳಿಗೆ ಕಡಿವಾಣ ಹಾಕಲು ಈಗ ಗೃಹಮಂತ್ರಿ ಅಮಿತ್ ಶಾ, ಮುಂದಿನ ಮುಂಗಾರು ಅಧಿವೇಶನದಲ್ಲಿ ವಿಧೇಯಕ ತರಲಿದ್ದಾರಂತೆ. ಜನನ ಮತ್ತು ಮರಣದ ಮಾಹಿತಿಯನ್ನು ಮತದಾರರ ಪಟ್ಟಿಯೊಂದಿಗೆ ಲಿಂಕ್ ಮಾಡಿ ಈ ನಕಲಿ ಓಟುಗಳ ಹಾವಳಿ ತಪ್ಪಿಸುವ ಇರಾದೆ ಅವರದ್ದು. ನಮ್ಮ ಕೇಂದ್ರ ಸರಕಾರ ಅದನ್ನು ಇದಕ್ಕೆ, ಇದನ್ನು ಅದಕ್ಕೆ ಲಿಂಕ್ ಮಾಡಿಸೋದು ಹೊಸ ದೇನೂ ಅಲ್ಲ. ಬೇರೆ ಎಲ್ಲಾ ಲಿಂಕಿಂಗ್‌ಗಳು ಬರೀ ಕಿರಿಕಿರಿ ಎನಿಸಿದರೆ, ಇದು ಮಾತ್ರ ಸರಿಯಾದ ಮತ್ತು ಜನೋಪಯೋಗಿ ನಡೆ ಎಂದು ಖಂಡಿತವಾಗಿ ಹೇಳಬಹುದು. ನಮ್ಮ ದೇಶದಲ್ಲಿ ಬದುಕಿದ್ದರೂ ಸತ್ತಂತೆ ಮತದಾನ ಮಾಡದೇ ಇರೋ ಎಷ್ಟೋ ಜನ ಹೇಗೆ ಇದ್ದಾರೋ, ಹಾಗೆಯೇ ಸತ್ತರೂ ಓಟು ಹಾಕುವ ನಿಷ್ಠಾವಂತ ಪ್ರಜೆಗಳೂ ಇದ್ದಾರೆ. ಹಾಗಾಗಿ ಇಂಥ ನಿಷ್ಠಾ ವಂತ ಪ್ರಜೆಗಳು ಓಟು ಹಾಕೋ ಅನಿಷ್ಟ ಪದ್ಧತಿಗೆ ಬ್ರೇಕ್ ಹಾಕಲು ಈಗ ಈ ಮತದಾರರ ಪಟ್ಟಿಯ ಲಿಂಕಿಂಗ್ ಮಾಡಲಾಗುತ್ತಿದೆ. ನಮ್ಮ ದೇಶದಲ್ಲಿ ಅಸಲಿ ಓಟುಗಳ ಕಿಮ್ಮತ್ತು ಎಷ್ಟಿದೆಯೋ ಗೊತ್ತಿಲ್ಲ, ಆದರೆ ಇಂಥ ವಿದೇಯಕ ಮಂಡನೆಯಿಂದ ನಕಲಿ ಓಟುಗಳಿಗೆ ಮಾತ್ರ ಕವಡೆ ಕಾಸಿನ ಕಿಮ್ಮತ್ತು ಇಲ್ಲ ಎಂಬ ಸಂದೇಶವನ್ನು ಕೇಂದ್ರ ಸರಕಾರ ರವಾನಿಸುತ್ತಿದೆ ಅನ್ನೋದಂತೂ ಸತ್ಯ.

ಸಂಪಾದಕರ ಸದ್ಯಶೋಧನೆ

ಚಾಪ್ಲಿನ್ ದೇಶಭ್ರಷ್ಟರಾಗಿದ್ದು ಹೇಗೆ?

ಜಗದ್ವಿಖ್ಯಾತ ನಟ ಚಾರ್ಲಿ ಚಾಪ್ಲಿನ್ ಕೂಡ ಪ್ರಭುತ್ವದ ಕೆಂಗಣ್ಣಿಗೆ ಗುರಿಯಾಗಿ ದೇಶ ತೊರೆಯುವಂಥ ಪರಿಸ್ಥಿತಿ ನಿರ್ಮಾಣವಾಗಿತ್ತು ಎಂಬುದು ಅನೇಕರಿಗೆ ಗೊತ್ತಿರಲಿಕ್ಕಿಲ್ಲ. ಚಾಪ್ಲಿನ್ ವಿರುದ್ಧ ಇಲ್ಲಸಲ್ಲದ ಆಪಾದನೆಗಳನ್ನು ಹೊರಿಸಲಾಯಿತು. ತಮಾಷೆ ಅಂದ್ರೆ, ಚಾಪ್ಲಿನ್ ಕಮ್ಯುನಿಸ್ಟ್ ಏಜೆಂಟ್ ಎಂದೂ, ಅವರ ಜತೆ ವ್ಯವಹಾರ ಹೊಂದಿದ್ದಾರೆಂದೂ, ಅವರ ಪರ ಸಹಾನುಭೂತಿ ಹೊಂದಿದ್ದಾರೆಂದೂ ಆರೋಪ ಹೊರಿಸಲಾಯಿತು. ಚಾಪ್ಲಿನ್ ಕಮ್ಯುನಿಸ್ಟ್ ಸಹಾನುಭೂತಿಯ ಆರೋಪದ ನಂತರ 1952 ರಲ್ಲಿ ಅಮೆರಿಕವನ್ನು ತೊರೆಯಬೇಕಾಯಿತು. ಅವರ ರಾಜಕೀಯ ದೃಷ್ಟಿಕೋನ ಮತ್ತು ಕಮ್ಯುನಿಸ್ಟರು ಎಂದು ಶಂಕಿಸಲಾದ ಜನರೊಂದಿಗೆ ಒಡನಾಟ ಇಟ್ಟುಕೊಂಡಿದ್ದರು ಎಂಬುದು ಅವರ ವಿರುದ್ಧ ಕೇಳಿ ಬಂದ ಆರೋಪ. ಚಾಪ್ಲಿನ್ ಪರಿಪರಿಯಾಗಿ ಬೇಡಿಕೊಂಡರು. ತಾವು ಕಮ್ಯುನಿಸ್ಟ್ ವಿಚಾರಧಾರೆ ಹೊಂದಿಲ್ಲವೆಂದು ಮನವರಿಕೆ ಮಾಡಿಕೊಡಲು ಪ್ರಯತ್ನಿಸಿದರು. ಆದರೆ ಹಾಲಿವುಡ್‌ನಲ್ಲಿ ಅವರನ್ನು ಕಪ್ಪುಪಟ್ಟಿಗೆ ಸೇರಿಸಲು ಅವರ ಮೇಲಿನ ಆ ಆರೋಪಗಳು ಸಾಕಾಗಿದ್ದವು. ಅವರಿಗೆ ಅಮೆರಿಕಕ್ಕೆ ಮರು-ಪ್ರವೇಶದ ಪರವಾನಗಿಯನ್ನು ನಿರಾಕರಿಸಲಾಯಿತು. ಇದರ ಪರಿಣಾಮ ಅವರು ಸ್ವಿಜರಲ್ಯಾಂಡಿನಲ್ಲಿ ಇಪ್ಪತ್ತು ವರ್ಷಗಳ ಕಾಲ ದೇಶಭ್ರಷ್ಟರಾಗಿ ವಾಸಿಸುವಂತಾಯಿತು. ಚಾಪ್ಲಿನ್ ವಿರುದ್ಧದ ಆರೋಪಗಳು ಮೆಕಾರ್ಥಿ ಯುಗದ ಭಾಗವಾಗಿದ್ದು, ಅಮೆರಿಕದಲ್ಲಿ ಒಂಥರದ ರಾಜಕೀಯ ಮತಿವಿಕಲ್ಪವಿತ್ತು. ಈ ಸಮಯದಲ್ಲಿ, ಕಮ್ಯುನಿಸ್ಟ್ ಪಕ್ಷದೊಂದಿಗೆ ಯಾವುದೇ ಸಂಬಂಧವಿಲ್ಲದಿದ್ದರೂ ಸಹ ಅನೇಕ ಜನರು ಕಮ್ಯುನಿಸ್ಟರು ಎಂಬ ಮಿಥ್ಯಾರೋಪವನ್ನು ಹೊರಿಸಿ ಅವರಿಗೆ ಕಿರುಕುಳ ಕೊಡಲಾಗುತ್ತಿತ್ತು. ಈ ಸಮಯದಲ್ಲಿ ಅನೇಕರನ್ನು ಕಪ್ಪುಪಟ್ಟಿಗೆ ಸೇರಿಸಲಾಯಿತು. ಆ ಪೈಕಿ ಚಾಪ್ಲಿನ್ ಕೂಡ ಒಬ್ಬರಾಗಿದ್ದರು. ಎರಡನೇ ರೆಡ್ ಸ್ಕೇರ್ ಎಂದೂ ಕರೆಯಲಾಗುವ ಮೆಕಾರ್ಥಿಸಂ, ಎಡಪಂಥೀಯ ವ್ಯಕ್ತಿಗಳ ರಾಜಕೀಯ ದಮನ ಮತ್ತು ಕಿರುಕುಳದ ಅವಧಿ ಎಂದೇ ಬಣ್ಣಿತವಾಗಿದೆ. 1940 ರ ಉತ್ತರಾರ್ಧದಲ್ಲಿ ಅಮೆರಿಕದಲ್ಲಿ ಸೋವಿಯತ್ ಬೇಹುಗಾರಿಕೆ ಮತ್ತು ಅಮೆರಿಕದ ಸಂಸ್ಥೆಗಳ ಮೇಲೆ ಆಪಾದಿತ ಕಮ್ಯುನಿಸ್ಟ್ ಮತ್ತು ಸಮಾಜವಾದಿ ಪ್ರಭಾವದ ಭಯವನ್ನು ಹರಡುವ ತಂತ್ರವಾಗಿತ್ತು. 1950 ರ ಮಧ್ಯಭಾಗದ ನಂತರ, ಈ ಅಭಿಯಾನದ ನೇತೃತ್ವ ವಹಿಸಿದ್ದ ಅಮೆರಿಕ ಸೆನೆಟರ್ ಜೋಸೆಫ್ ಮೆಕಾರ್ಥಿ ಅವರ ಹಲವಾರು ಆರೋಪಗಳು ಸುಳ್ಳು ಎಂದು ಕಂಡು ಬಂದ ನಂತರ ಕ್ರಮೇಣ ಅವರು ಸಾರ್ವಜನಿಕ ಜನಪ್ರಿಯತೆ ಮತ್ತು ವಿಶ್ವಾಸಾರ್ಹತೆಯನ್ನು ಕಳೆದುಕೊಂಡರು. ಮೆಕಾರ್ಥಿ ಯುಗವು ಅಮೆರಿಕದಲ್ಲಿ ಬಹಳ ಭಯ ಮತ್ತು ಅನುಮಾನದ ಸಮಯವಾಗಿತ್ತು. ಕಮ್ಯುನಿಸ್ಟ್ ಪಕ್ಷದೊಂದಿಗೆ ಯಾವುದೇ ಸಂಬಂಧವಿಲ್ಲದಿದ್ದರೂ ಅನೇಕರನ್ನು ಕಮ್ಯುನಿಸ್ಟರು ಎಂದು ಆರೋಪಿಸಲಾಯಿತು. ಆರೋಪಿಗಳು ತಮ್ಮ ಕೆಲಸ, ಮನೆ ಮತ್ತು ಖ್ಯಾತಿಯನ್ನು ಕಳೆದುಕೊಂಡರು. ಮೆಕಾರ್ಥಿ ಯುಗವು ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ತಣ್ಣನೆಯ ಪರಿಣಾಮವನ್ನು ಬೀರಿತು, ಏಕೆಂದರೆ ಜನರು ಕಮ್ಯುನಿಸ್ಟರು ಎಂಬ ಆರೋಪಕ್ಕೆ ಅಂಜಿ ಮಾತನಾಡಲು ಹೆದರುತ್ತಿದ್ದರು. ಮೆಕಾರ್ಥಿ ಯುಗವು 1950 ರ ದಶಕದ ಮಧ್ಯಭಾಗದಲ್ಲಿ ಕೊನೆಗೊಂಡರೂ ಅದರ ಪರಿಣಾಮಗಳನ್ನು ಇಂದಿಗೂ ಅನುಭವಿಸಲಾಗುತ್ತಿದೆ. ಮೆಕಾರ್ಥಿ ಯುಗವು ರಾಜಕೀಯ ಕಿರುಕುಳದ ಅಪಾಯಗಳು ಮತ್ತು ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕನ್ನು ರಕ್ಷಿಸುವ ಪ್ರಾಮುಖ್ಯತೆಯನ್ನು ನೆನಪಿಸುತ್ತದೆ. ಚಾಪ್ಲಿನ್ನ ಗಡಿಪಾರು ಅವರಿಗೆ ತೀರಾ ಕಷ್ಟಕರ ಸಮಯವಾಗಿತ್ತು. ಅವರು ತಮ್ಮ ಕುಟುಂಬ ಮತ್ತು ಸ್ನೇಹಿತರಿಂದ ಬೇರ್ಪಟ್ಟರು. ಚಿತ್ರರಂಗದಲ್ಲಿ ಕೆಲಸ ಮಾಡಲು ಸಾಧ್ಯವಾಗಲಿಲ್ಲ. ಆರ್ಥಿಕ ತೊಂದರೆ ಅವರನ್ನು ಕಲ್ಲವಿಲಗೊಳಿಸಿತ್ತು. ಆದರೂ ಅವರು ಚಲನಚಿತ್ರಗಳನ್ನು ಮಾಡುವುದನ್ನು ಮುಂದುವರಿಸಿದರು ಮತ್ತು ಅವರು ಅಂತಿಮವಾಗಿ 1972 ರಲ್ಲಿ ಅಮೆರಿಕಕ್ಕೆ ಮರಳಿದರು. ಅವರಿಗೆ 1972 ರಲ್ಲಿ ಗೌರವ ಆಸ್ಕರ್ ಪ್ರಶಸ್ತಿಯನ್ನು ನೀಡಲಾಯಿತು. 1977 ರಲ್ಲಿ ಚಾಪ್ಲಿನ್ ನಿಧನರಾದರು. ಚಾಪ್ಲಿನ್ನ ಗಡಿಪಾರು ರಾಜಕೀಯ ಕಿರುಕುಳದ ಅಪಾಯಗಳ ಕಹಿನೆನಪಾಗಿದೆ. ಪ್ರತಿಭಾವಂತ ಕಲಾವಿದರಾಗಿದ್ದ ಚಾಪ್ಲಿನ್, ತಮ್ಮ ರಾಜಕೀಯ ನಂಬಿಕೆಗಳಿಂದಾಗಿ ದೇಶವನ್ನು ತೊರೆಯಬೇಕಾಗಿ ಬಂದಿದ್ದು ದುರಂತ.

ಪುಕ್ಸಟ್ಟೆ ಹಣ ಹಂಚುವುದು ಯಾವ ಸೀಮೆ ಸಮಾಜವಾದ?

ಶಿಶಿರ ಕಾಲ

ಶಿಶಿರ್ ಹೆಗಡೆ

shishirh@gmail.com

ಯಾರಿಗೆ ಬೇಡ ಪುಕ್ಸಟ್ಟೆ ಭಾಗ್ಯ? ಅದೆಷ್ಟೇ ಶ್ರೀಮಂತನೂ 'ಫ್ರೀ' ಎಂದರೆ ಒಂದು ಕ್ಷಣ ನಿಂತು ನೋಡುತ್ತಾನೆ. ಉಚಿತ ಎಂಬ ಶಬ್ದವೇ ಅಷ್ಟು ಆಕರ್ಷಣೀಯ. ಈ ಜಗತ್ತಿನಲ್ಲಿ ಯಾವುದೂ ಉಚಿತವಿರುವುದಿಲ್ಲ ಎಂದು ಎಲ್ಲರಿಗೂ ಗೊತ್ತು. ಆದರೂ ಈ ಒಂದು ಶಬ್ದ ಚಿತ್ತವನ್ನತ್ತ ಸೆಳೆಯದೇ ಇರುವುದಿಲ್ಲ. ಉಚಿತ ಎಂಬ ಶಬ್ದವಿಲ್ಲದ ಜಾಹೀರಾತು ನಾಲ್ಕಾಣೆ ಗಮನ ಸೆಳೆಯುವುದಿಲ್ಲ. ಉಚಿತವಾಗಿ ಕೊಟ್ಟರೆ ನನಗೊಂದು, ನಮ್ಮ ಪ್ಪಂಗೂ ಒಂದು ಎಂಬ ಮಾತಿದೆಯಲ್ಲ, ಪ್ರಾಥಮಿಕ ಶಾಲೆಯಲ್ಲಿ ನಮ್ಮ ಮಾಸ್ತರು ಬಡತನದ ಬಗ್ಗೆ ತೀರಾ ನಾಟುವಂತೆ ಪಾಠ ಮಾಡುತ್ತಿದ್ದರು. 'ಯಾಕೆ ಸರ್ ನಮ್ಮ ಸರಕಾರ ಒಂದಿಷ್ಟು ನೋಟು ಪ್ರಿಂಟ್ ಮಾಡಿ ಬಡವರಿಗೆಲ್ಲ ಹಂಚಿಬಿಡಬಾರದು' ಎಂದು ಒಬ್ಬ ಕೇಳಿದ್ದ. ಅದಷ್ಟೇ ನನಪಿಗಿದೆ. ಅವರು ಏನೆಂದು ಉತ್ತರಿಸಿದರು ಅದೆಲ್ಲ ನೆನಪಿಲ್ಲ. ಬಹುಶಃ ಅವರು ಹಾರಿಕೆಯ ಉತ್ತರ ಕೊಟ್ಟಿರಬಹುದು ಅಥವಾ ಅವರ ಉತ್ತರ ಅಂದು ನಮಗೆ ಅರ್ಥವಾಗಿರಲಿಕ್ಕಿಲ್ಲ. ನಿಮಗೆ ಸರಕಾರವೊಂದು ಹಣವನ್ನು ಬೇಕಾಬಿಟ್ಟಿ ಛಾಪಿಸಿ ತನ್ನ ನಾಗರಿಕರಿಗೆ ಹಂಚಿದರೆ ದೇಶದ ಆರ್ಥಿಕ ಪರಿಸ್ಥಿತಿ, ಹಣದುಬ್ಬರ ಏನಾಗುತ್ತದೆ ಎನ್ನುವುದು ಗೊತ್ತು. ಆದರೂ ಪುಕ್ಸಟ್ಟೆ ಹಣವನ್ನು ಸರಕಾರ ಹಂಚುತ್ತದೆ ಎಂದಾದರೆ 'ಹುಚ್ಚನ ಮದುವೆಯಲ್ಲಿ ಮೊದಲು ಊಟ' ಮಾಡದಿದ್ದ ಹಾಗಾಗುತ್ತದೆ ಅಲ್ಲವೇ? ಹಣ ಶ್ರಮವಿಲ್ಲದೆ ಸಿಕ್ಕರೆ, 'ಕೆಲಸ ಮಾಡಬೇಕಿಲ್ಲ ತಗೊಳ್ಳಿ' ಎಂದು ಸರಕಾರವೇ ಕೊಟ್ಟರೆ ಕಿಸೆಗಿಳಿಸಿಕೊಳ್ಳುವಾಗ ದೇಶ, ದೇಶಪ್ರೇಮ, ಆರ್ಥಿಕತೆ ಇವೆಲ್ಲ ನಾನ್ಸೆನ್ಸ್!

ಇಂದು ಜಗತ್ತಿನ ಹಲವು ದೇಶಗಳು ತಮ್ಮ ಆದಾಯಕ್ಕಿಂತ ಹೆಚ್ಚಿನ ಹಣವನ್ನು ಖರ್ಚು ಮಾಡುತ್ತವೆ. ಇನ್ನು ಕೆಲವು, ದೇಶವೊಂದರ ಅಭಿವೃದ್ಧಿಗೆ ಪೂರಕವಲ್ಲದ ಹಲವು ಯೋಜನೆಗಳಲ್ಲಿ ಹಣವನ್ನು ಪೋಲು ಮಾಡಿ ಅಥವಾ ಮುಫತ್ತಾಗಿ ಹಣವನ್ನು ಹಂಚಿ ಕ್ರಮೇಣ ಆರ್ಥಿಕ ಹಿನ್ನಡೆಯನ್ನು ಅನುಭವಿಸುತ್ತವೆ. ರಾಜಕೀಯ ಪಕ್ಷವೊಂದು ಅಧಿಕಾರಕ್ಕೆ ಬರಬೇಕೆನ್ನುವ ಹವಣಿಕೆಯಲ್ಲಿ ತನ್ನನ್ನು ಆರಿಸಿದರೆ ಏನೆಲ್ಲ ಉಚಿತವಾಗಿ ಕೊಡುತ್ತೇವೆ ಎನ್ನುವ ನಿರೂಪಣೆ ಕ್ರಮೇಣ ಮಹತ್ವವನ್ನು ಪಡೆದು ದೇಶದ ಬೆಳವಣಿಗೆಯ ಕುರಿತಾದ ಮಾತುಗಳು ಗೌಣವಾಗುತ್ತ ಹೋಗುತ್ತದೆ. ಹೀಗೆ ಮಾತುಕೊಟ್ಟ ಉಚಿತ ಸವಲತ್ತುಗಳನ್ನು ಪೂರೈಸದಿದ್ದರೆ ಪುನಃ ಅಧಿಕಾರಕ್ಕೆ ಬರಲಾರೆವು ಎಂದು ಎಲ್ಲ ಆರ್ಥಿಕ ಪ್ರಶ್ನೆಗಳನ್ನು ಮೀರಿ ಪೂರೈಸಲು ಆಡಳಿತ ಮುಂದಾಗುತ್ತವೆ. ಹೇಳಿದ್ದು ಕೊಡಲಿಲ್ಲವೆಂದರೆ ವಚನಭ್ರಷ್ಟ ಎಂಬ ಆರೋಪ.

ದೇಶ ತನ್ನ ತಾಕತ್ತನ್ನು, ಆದಾಯವನ್ನು ಮೀರಿ ಹೆಚ್ಚಿನ ಖರ್ಚು ಮಾಡಿದರೆ ಅದು ವಿತ್ತೀಯ ಕೊರತೆ (fiscal deficit). ಹೆಚ್ಚಿನ ದೇಶಗಳು ಕೊರತೆಗೆ ಒಂದು ಮಿತಿಯನ್ನು ನಿಗದಿಸಿಕೊಂಡಿರುತ್ತವೆ. ಆ ಮಿತಿ ಮೀರಿದರೆ ಮುಂದೊಂದು ದಿನ ದಿವಾಳಿಯಾಗುವ ಅಪಾಯ ಪಕ್ಕಾ. ಇದನ್ನು ತಪ್ಪಿಸಲು ಒಂದೋ ತೆರಿಗೆ ಹೆಚ್ಚಿಸಬೇಕು, ಇಲ್ಲ ನೋಟನ್ನು ಪ್ರಿಂಟ್ ಮಾಡಬೇಕು. ಈ ಲೆಕ್ಕ ಮೀರಿ ಮನಸ್ಸಿಗೆ ತೋಚಿದಂತೆ ಹಣವನ್ನು ಪ್ರಿಂಟ್ ಮಾಡಿದರೆ ಹಣದುಬ್ಬರ ಹೆಚ್ಚುತ್ತದೆ. ಅದನ್ನು ದಕ್ಕಿಸಿಕೊಳ್ಳಬೇಕೆಂದರೆ ನಮ್ಮದು ಡಾಲರಿನಂತೆ ಜಾಗತಿಕ ಕರೆನ್ಸಿಯಾಗಿರಬೇಕು. ಅದಿಲ್ಲದಿದ್ದರೆ ರುಪಾಯಿ ತನ್ನ ಮೌಲ್ಯವನ್ನು ವಿಶ್ವ ಮಟ್ಟದಲ್ಲಿ ಕಳೆದುಕೊಳ್ಳುತ್ತದೆ. ಮೌಲ್ಯ ಕಡಿಮೆ ಆದರೆ ನಾವು ಆಮದು ಮಾಡುವ ವಸ್ತುಗಳಿಗೆ ಹೆಚ್ಚಿನ ಹಣ ತೆರಬೇಕಾಗುತ್ತದೆ. ಇದರ ನೇರ ಪರಿಣಾಮ ಪೆಟ್ರೋಲಿಯಂ ಉತ್ಪನ್ನಗಳು ಮತ್ತು ಉಳಿದ ಎಲ್ಲ ವಸ್ತುಗಳ ಬೆಲೆ ಏರಿಕೆಗೆ ಕಾರಣವಾಗುತ್ತದೆ. ದೇಶವೊಂದು ಮೂರು ಪ್ರತಿಶತಕ್ಕಿಂತ ಕಡಿಮೆ ಮಿತಿಯಲ್ಲಿ ವಿತ್ತೀಯ ಕೊರತೆಯನ್ನು ನಿಭಾಯಿಸಿಕೊಂಡರೆ ಒಳಿತು ಎನ್ನುವುದು ಒಂದು ಆರೋಗ್ಯಕರ ಲೆಕ್ಕಾಚಾರ.

ನಿಮಗೆ ಗ್ರೀಸಿನ ಕಥೆ ಹೇಳಬೇಕು. ಇಂಥದ್ದೊಂದು ಲೆಕ್ಕಾಚಾರವನ್ನು ಮೀರಿ ಗ್ರೀಸ್ ತನ್ನ ಹಣವನ್ನು ಖರ್ಚು ಮಾಡಿದ್ದು, ಉಚಿತವಾಗಿ ಜನರಿಗೆ ಹಣವನ್ನು ಹಂಚುವ ಯೋಜನೆಗಳನ್ನು ಜಾರಿಗೆ ತಂದದ್ದು ಮತ್ತು ಅದರ ನಂತರವಾದ ಆದ ಅವಾಂತರ ಇವು ಎಲ್ಲೆಯನ್ನು ಮೀರಿ ನಡೆದುಕೊಂಡರೆ ಏನಾದೀತು ಎನ್ನುವುದಕ್ಕೆ ಒಂದು ಜೀವಂತ ಸಾಕ್ಷಿ. ಗ್ರೀಕ್, ಯುರೋಪಿಯನ್ ಒಕ್ಕೂಟದ ಒಪ್ಪಂದಕ್ಕೆ ಸಹಿಹಾಕಿದ ಮೇಲೆ ಅಲ್ಲಿ 'ಯುರೋ' ಚಲಾವಣೆಗೆ ಬಂತು. ಈ ಒಪ್ಪಂದದ ಪರಿಣಾಮ ಯುರೋಪಿಯನ್ ಯೂನಿಯನ್‌ನ ಸೆಂಟ್ರಲ್ ಬ್ಯಾಂಕ್ ಎಷ್ಟು ಹಣವನ್ನು ಒಕ್ಕೂಟದ ದೇಶಗಳು ಪ್ರಿಂಟ್ ಮಾಡಬಹುದು ಎಂದು ನಿರ್ಧರಿಸುವ ಸಂಸ್ಥೆಯಾಯಿತು. ಅಲ್ಲಿ ಆಯಾಯ ದೇಶಗಳು ಅವರವರ ಖರ್ಚಿಗೆ ಜವಾಬ್ದಾರರಾಗಿದ್ದರು. ಗ್ರೀಸ್‌ನ ಆಡಳಿತ ಪಕ್ಷ ಮಾತ್ರ ತನ್ನ ಜನರಿಗೆ ಕ್ರಮೇಣ ಅಗ್ಗದ ದರದಲ್ಲಿ ಮತ್ತು ಪುಕ್ಸಟ್ಟೆ ಸವಲತ್ತುಗಳನ್ನು ಕೊಡಲು, ಜನರ ಓಲೈಕೆಯಲ್ಲಿ ತೊಡಗಿಕೊಂಡಿತು. ಕ್ರಮೇಣ ದೇಶದ ಖರ್ಚು ವೆಚ್ಚದ ಲೆಕ್ಕಾಚಾರವನ್ನು 1995ರ ಸಮಯದಲ್ಲಿ ಸರಕಾರ ಸುಳ್ಳು ಹೇಳಲು ಶುರುವಿಟ್ಟುಕೊಂಡಿತು. ಖೋತಾ ಬಜೆಟ್ಟಿನ ಸತ್ಯವನ್ನು ಹೊರ ಜಗತ್ತಿಗೆ ಮತ್ತು ಯುರೋಪಿಯನ್ ಒಕ್ಕೂಟದಿಂದ ಮುಚ್ಚಿಡಲಾಯಿತು. ನಂತರ ಸರಕಾರ ಬದಲಾಯಿತು ಆದರೆ ಉಚಿತ ಸೌಲಭ್ಯಗಳು ಜನರಿಗೆ ಅದಾಗಲೇ ಅಭ್ಯಾಸವಾಗಿ ಹೋಗಿತ್ತು. ನಂತರ ಬಂದ ಇನ್ನೊಂದು ಆಡಳಿತ ಪಕ್ಷ ಕೂಡ ಇದೇ ಸುಳ್ಳನ್ನು ಮುಂದುವರಿಸಿಕೊಂಡು ಹೋಗಬೇಕಾದ ಅನಿವಾರ್ಯ. ಉಚಿತ ಸೌಲಭ್ಯ ಮುಂದುವರಿಯಿತು. ಮುಂದೊಂದು ದಿನ 2009ರಲ್ಲಿ ದೇಶ ಹಠಾತ್ತನೆ ದಿವಾಳಿ ತಲುಪಿದ್ದ ಸುದ್ದಿ ಹೊರಗೆ ಬಂತು. ಅಂದಿನ ಸರಕಾರ ಸುಮಾರು ಶೇ.13.9 ಖೋತಾ ಬಜೆಟ್ ಅನ್ನು ಮಂಡಿಸಿತು ಮತ್ತು ಈ ಹಿಂದಿನ ಸರಕಾರಗಳು ಮುಚ್ಚಿಟ್ಟ ಸತ್ಯವನ್ನು ಬಹಿರಂಗಪಡಿಸಲೇ ಬೇಕಾಯಿತು. ಅದಾಗಲೇ ಗಾಯವಾಗಿ ಹೋಗಿತ್ತು. ದೇಶದಲ್ಲಿ ಎಲ್ಲಿಲ್ಲದ ಬಡತನ ಮತ್ತು ನಿರುದ್ಯೋಗ ಸಮಸ್ಯೆಗಳು ಭುಗಿಲೆದ್ದವು. ಹೀಗೊಂದು ಸಮಸ್ಯೆಯ ಸುಳಿವೇ ಇಲ್ಲದ ಮತ್ತು ಹಠಾತ್ತನೆ ಎದುರಿಗೆ ಬಂದ ಸತ್ಯದಿಂದಾಗಿ ಅಲ್ಲಿನ ಸ್ಟಾಕ್ ಮಾರ್ಕೆಟ್‌ಗಳು ಥಟ್ಟನೆ ಒಂದೆರಡು ದಿನದಲ್ಲಿ ಪಾತಾಳವನ್ನು ಕಂಡವು. ಸಾಮಾನ್ಯ ಜನರಿಗೂ ಕೂಡ ಇದರ ಪರಿವೆಯೇ ಇರಲಿಲ್ಲ. ಈ ಸುದ್ದಿ ಗ್ರೀಸ್ ನಾಗರೀಕರನ್ನು ಕೇವಲ ಒಂದು ವಾರದ ಅವಧಿಯಲ್ಲಿ ಕಂಗಾಲು ಮಾಡಿಬಿಟ್ಟಿತು. ದೇಶದ ಸದೃಢತೆಯ ಬಗ್ಗೆ ಇದ್ದ ಎಲ್ಲ ನಂಬಿಕೆಗಳು ಹುಸಿಯಾಗಿದ್ದವು. ಒಂದು ಅತ್ಯದ್ಭುತ ಇತಿಹಾಸ, ಶ್ರೀಮಂತಿಕೆ, ಸಂಸ್ಕೃತಿ ಎಲ್ಲವಿದ್ದರೂ ಅದ್ಯಾವುದು ಆಗ ಕೆಲಸಕ್ಕೆ ಬರಲಿಲ್ಲ. ಕೇವಲ 10-15 ವರ್ಷಗಳಲ್ಲಿ ಮಾಡಿದ ರಾಜಕೀಯ ಪಕ್ಷದ ಬಂಧತನಗಳು ಅದೆಲ್ಲವನ್ನು ಪಕ್ಕಕ್ಕಿರಿಸಿ ಒಂದು ಮಹಾ ಆರ್ಥಿಕ ಹಿಂಜರಿತಕ್ಕೆ ಕಾರಣವಾಯಿತು. ಗ್ರೀಸ್ ಈ ಒಂದೆರಡು ದಶಕದಲ್ಲಿ ಮಾಡಿಕೊಂಡ ಅವಾಂತರಗಳು ಶತಮಾನಗಳ ದೇಶದ ಸಾಧನೆಯನ್ನು ಮಣ್ಣಾಗಿಸಿದ್ದಲ್ಲದೇ ದೇಶವನ್ನು 5-6ದಶಕ ಹಿಂದಕ್ಕೆ ಕೊಂಡೊಯ್ದು ಬಿಟ್ಟಿತ್ತು.

ಗ್ರೀಸ್ ತನ್ನ ಅಸ್ತಿತ್ವಕ್ಕೆ ಒದ್ದಾಡಿಬಿಟ್ಟಿತು. ಕೇಳರಿಯದ ಅವ್ಯವಸ್ಥೆಯಲ್ಲಿ ಜನ ತಮ್ಮ ತಾಳ್ಮೆ ಕೊಂಡರು. ಕಂಪನಿಗಳು ದಿವಾಳಿಯಾಗಿ ಅದರ ಪರಿಣಾಮವಾಗಿ ನಿರುದ್ಯೋಗ ಇನ್ನೊಂದು ಸಮಸ್ಯೆಯಾಯಿತು. ಉತ್ತಮ ನುರಿತ ಕೆಲಸಗಾರರು ಅವಕಾಶವನ್ನರಸಿ ದೇಶಬಿಟ್ಟರು. ಅಲ್ಲಿನ ಉಳಿದುಕೊಂಡ ಮಂದಿ ಅಲ್ಲಲ್ಲಿ ದಂಗೆ ಎದ್ದು ಇನ್ನಷ್ಟು ಹಾನಿಗೆ ಕಾರಣವಾದರು. ಸಾಮಾನ್ಯರಲ್ಲಿ ಹಣವಿಲ್ಲದಿರುವುದರಿಂದ ಯಾವುದೇ ವ್ಯಾಪಾರ ವ್ಯವಹಾರ ಸಸೂತ್ರ ನಡೆಯಲಿಲ್ಲ, ಇದರಿಂದ ಯಾವುದೇ ಕಂಪನಿ ಮತ್ತೆ ಮೇಲೆದ್ದುಕೊಳ್ಳಲು ಇಂದಿಗೂ ಸಾಧ್ಯವಾಗುತ್ತಿಲ್ಲ. ಈಗ ಬಜೆಟ್‌ನಲ್ಲಿ ದೇಶ ಉಸಿರಾಡಲು ಎಷ್ಟು ಖರ್ಚು ಮಾಡಬೇಕೋ ಅಷ್ಟಕ್ಕೇ ಅವಕಾಶವಿದೆ. ಅಂತೆಯೇ ಈ ಹಿನ್ನೆಲೆಯಲ್ಲಿ ದೇಶದಲ್ಲಿ ಸಂಗ್ರಹವಾಗುವ ತೆರಿಗೆಯೂ ಕಡಿಮೆಯಾಗಿದೆ. ಅಲ್ಲಿನ ಸರಕಾರ ಅದ್ಯಾವ ಪರಿಯ ದೈನೇಸಿ ಸ್ಥಿತಿಗೆ ತಲುಪಿತು ಎಂದರೆ ಸರಕಾರೀ ನೌಕರರಿಗೆ ಸಂಬಳ ಕೊಡಲು ಹೆಣಗಾಡಬೇಕಾಯಿತು. ಅಲ್ಲಿನ ಸರಕಾರೀ ಸ್ವಾಮ್ಯದ ವಿದ್ಯುತ್ ಮಂಡಳಿಯ ನೌಕರರಿಗೆ ಸಂಬಳ ಪಾವತಿಸಲಾಗದೇ ಹೋದಾಗ ಅವರೆಲ್ಲ ಮುಷ್ಕರ ನಡೆಸಿ ಸುಮಾರು ಎರಡು ದಿನ ಇಡೀ ದೇಶಕ್ಕೆ ದೇಶವನ್ನೇ ಕತ್ತಲೆಯಲ್ಲಿಟ್ಟಿತ್ತು.

ಒಂದು ದೇಶ ಆರ್ಥಿಕ ದಿವಾಳಿಯಾದಾಗ ವರ್ಡ್ ಬ್ಯಾಂಕ್ ಮತ್ತು ಇಂಟರ್ನ್ಯಾಷನಲ್ ಮೊನೆಟೋರಿ ಫಂಡ್ (ಐಎಉ) ಗಳು ಬಂದು ಐಸಿಯು ನಲ್ಲಿರುವ ದೇಶಕ್ಕೆ ಒಂದಿಷ್ಟು ಒತ್ತಡವನ್ನು ಹೇರುತ್ತವೆ. ಥೇಟ್ ಚಲನಚಿತ್ರಗಳಲ್ಲಿ ಬರುವ ಜಮೀನ್ದಾರರಂತೆ. ಕ್ರಮೇಣ ಸರಕಾರ ಜನಸಾಮಾನ್ಯರಿಂದ ಹೆಚ್ಚಿನ ತೆರಿಗೆ ವಸೂಲಿ ಮಾಡಬೇಕಾಗುತ್ತದೆ, ಖರ್ಚು ಕಡಿಮೆ ಮಾಡಿ ಕೆಲವು ವ್ಯವಹಾರಗಳನ್ನು ಖಾಸಗಿ ಕಂಪನಿಗಳಿಗೆ (ಅವು ಹೆಚ್ಚಾಗಿ ವಿದೇಶೀ ಖಾಸಗಿ ಕಂಪನಿಗಳಿಗೆ, ಏಕೆಂದರೆ ಅಲ್ಲಿನ ಸ್ಥಳೀಯ ಖಾಸಗಿ ಕಂಪನಿಗಳಿಗೆ ಆ ತಾಕತ್ತು ಇರುವುದೇ ಇಲ್ಲ) ಮಾರಬೇಕಾಗುತ್ತದೆ ಮತ್ತು ಹಾಗೆ ಮಾರಿ ಸಿಕ್ಕ ಹಣವನ್ನು ಆಡಳಿತಕ್ಕೆ ಮತ್ತು ಸಾಲ ಮರುಪಾವತಿಗೆ ಬಳಸಬೇಕಾಗುತ್ತದೆ. ಸಾಲಗಾರ ಪಡೆದ ಹಣವನ್ನು ತೀರಿಸಲು ಮನೆಯಲ್ಲಿರುವ ಚಿನ್ನ ಮಾರಿದಂತೆ ದೇಶ ತನ್ನ ಆಸ್ತಿಯನ್ನು ಮಾರುವ ಪರಿಸ್ಥಿತಿ. ಇದರಿಂದ ಸರಕಾರ ಇನ್ನಷ್ಟು ಬಡವಾಗುತ್ತ ಹೋಗುತ್ತದೆ. ಪಕ್ಕಾ ಸಾಲಗಾರನಿಗಾಗುವ ಎಲ್ಲ ಅವಸ್ಥೆಗಳು ಒಂದು ದೇಶಕ್ಕಾಗುತ್ತದೆ. ಇದು ಇಂದು ಕೇವಲ ಗ್ರೀಸ್ ಒಂದೇ ದೇಶದ ಪರಿಸ್ಥಿತಿಯಲ್ಲ, ಪೋರ್ಚುಗಲ್, ಐರ್ಲೆಂಡ್, ಸ್ಪೇನ್ ಮತ್ತು ಇಟಲಿ ಕೂಡ ಇದೆ ಹಾದಿಯಲ್ಲಿ ಸಾಗುತ್ತಿವೆ.

ಈ ಉದಾಹರಣೆಯಿಂದ ತಿಳಿದುಕೊಳ್ಳಬೇಕಾದ ಒಂದು ಮುಖ್ಯವಾದ ವಿಚಾರವೆಂದರೆ ಒಂದು ಸರಕಾರೀ ವ್ಯವಸ್ಥೆ ಬೇಕಾ ಬಿಟ್ಟಿ ಖರ್ಚುಮಾಡುವುದು ಮತ್ತು ಅಲ್ಲಿನ ರಾಜಕೀಯ ಪಕ್ಷಗಳು ಆಡಳಿತಕ್ಕೆ ಬಂದಾಕ್ಷಣ ಹಣವನ್ನು ಪುಕ್ಕಟೆ ಹಂಚುವುದು ಇವು ಆ ದೇಶ ದಿವಾಳಿಯತ್ತ ಇಡುವ ಹೆಜ್ಜೆಗಳೆಂದೇ ಪರಿಭಾವಿಸಬೇಕು. ಸರಕಾರ ಹೆಚ್ಚುಕಮ್ಮಿ ಯಾವುದೇ ಹಣವನ್ನು ತೊಡಗಿಸುವಾಗ ಅಥವಾ ಖರ್ಚು ಮಾಡುವಾಗ ಒಂದು ವ್ಯಾಲ್ಯೂ ಪ್ರೊಪೊಸಿಷನ್ (ಖರ್ಚಿನ ಮೌಲ್ಯಮಾಪನ) ಇರಲೇ ಬೇಕು. ಈ ಹಣದಿಂದ ತನ್ನ ನಾಗರೀಕರಿಗೆ ಮತ್ತು ದೇಶಕ್ಕೆ ಆಗುವ ಲಾಭಗಳೇನು ಮತ್ತು ದೀರ್ಘಾವಧಿಯಲ್ಲಿ ಇದು ಬೀರುವ ಅಡ್ಡ ಮತ್ತು ನೇರ ಪರಿಣಾಮಗಳೇನು ಎನ್ನುವುದನ್ನು ಅಂದಾಜಿಸಬೇಕು. ಒಂದು ದೃಷ್ಟಿಯಲ್ಲಿ ಸರಕಾರ ಒಂದು ಬೃಹತ್ ಕಂಪನಿಯಂತೆಯೇ. ಇಲ್ಲಿ ನಾವೆಲ್ಲಾ ಹೆಚ್ಚು ಹೆಚ್ಚು ದುಡಿದರೆ ಮಾತ್ರ, ದೇಶವೊಂದನ್ನು ಬೆಳೆಸಿ ನಿಲ್ಲಿಸಲು ಸಾಧ್ಯ. ಬಡವನಿರಲಿ, ಶ್ರೀಮಂತನಿರಲಿ ದೇಶದ ಸಂಪತ್ತನ್ನು ಹೆಚ್ಚಿಸುವಲ್ಲಿ ಸಮಗ್ರವಾಗಿ ಕೆಲಸ ಮಾಡಬೇಕಾಗುತ್ತದೆ. ಸರಕಾರದ ಯಾವುದೇ ಕಾರ್ಯಕ್ರಮ ಅಲ್ಲಿನ ಜನರನ್ನು ಮೇಲೆತ್ತುವ ನೆಪ ಕೊಟ್ಟು ಆಲಸಿಗಳನ್ನಾಗಿಸುತ್ತದೆ ಎಂದಾದರೆ ಆ ಕಾರ್ಯಕ್ರಮ ದೇಶಕ್ಕೆ ಅಹಿತವೇ. ಖಾಸಗಿ ಕಂಪನಿಗಳಿಗೆ ಅದರ ಶೇರ್ ಹೋಲ್ಡರ್‌ಗಳು ಮಾಲೀಕರಾದರೆ ಸರಕಾರ ಎಂಬುದು ಉದ್ಯೋಗಿಯೇ ಮಾಲೀಕನಾಗಿರುವ ಬೃಹತ್ ವ್ಯವಸ್ಥೆ. ಈ ಕಂಪನಿಯಲ್ಲಿ - ವ್ಯವಸ್ಥೆಯಲ್ಲಿ ದೇಶದ ನಾಗರಿಕರೆಲ್ಲ ಉದ್ಯೋಗಿಗಳು ಮತ್ತು ವಾರಸುದಾರರು. ಸರಕಾರದ ಮತ್ತು ಖಾಸಗೀ ಕಂಪನಿಯ ವ್ಯಾಲ್ಯೂ ಪ್ರೊಪೊಸಿಷನ್‌ಗಳು ವಿಭಿನ್ನವಾಗಿರುತ್ತವೆ. ಉದಾಹರಣೆಗೆ ಖಾಸಗಿ ಸಂಸ್ಥೆಯೊಂದು ಹಣಕ್ಕಾಗಿ ಶಾಲೆಯೊಂದನ್ನು ಕಟ್ಟಬಹುದು ಆದರೆ, ಸರಕಾರ ಕಟ್ಟಿ ಬೆಳೆಸುವ ಶಾಲೆಗಳು ಉತ್ತಮ ಮಾನವ ಸಂಪನ್ಮೂಲದ ಬೆಳವಣಿಗೆಗೆ. ಹಾಗೆ ಶಾಲೆಯಲ್ಲಿ ಸರಕಾರ ತೊಡಗಿಸಿದ ಹಣ ಮುಂದೊಂದು ದಿನ ಉತ್ತಮ ಮಾನವ ಸಂಪನ್ಮೂಲವಾಗಿ ದೇಶದ ಆಸ್ತಿಯಾಗುತ್ತದೆ. ಅಂತೆಯೇ ರೈತ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದವರ ಬಲವನ್ನು ಹೆಚ್ಚಿಸುವ ಯೋಗ್ಯ ಯೋಜನೆಗಳು ಜಾರಿಗೆ ಬರಬೇಕೆ ವಿನಃ ಉಚಿತ ಹಣ ಹಂಚುವುದರಿಂದ ಪ್ರಯೋಜನವಿಲ್ಲ. ಈ ನಾಕರೀಕತೆಯ ಓಟದಲ್ಲಿ ಎಲ್ಲರನ್ನು ಒಟ್ಟಿಗೆ ಕೈ ಜೋಡಿಸಿದರೆ ಮಾತ್ರ ದೇಶ ಗಟ್ಟಿಯಾಗಲು ಸಾಧ್ಯ.

ಯಾವುದೇ ಸರಕಾರದ ಕಾರ್ಯಕ್ರಮವೊಂದು ಈ ಮೂಲ ಆಶಯಗಳನ್ನು ಮರೆತು ತನ್ನ ಪ್ರಜೆಗಳಿಗೆ ಉಚಿತವಾಗಿ ಸೌಲಭ್ಯಗಳನ್ನು, ಹಣವನ್ನು ಕೊಡುವ ಮತ್ತು ಜಡತ್ವಕ್ಕೆ ದೂಡುವ ಕೆಲಸ ಮಾಡಿದರೆ ಮುಂದೆ ಅದೊಂದು ವ್ಯವಸ್ಥೆಯ ಕ್ಯಾನ್ಸರ್‌ನಂತೆ ಕೆಲಸ ಮಾಡುತ್ತದೆ, ಗ್ರೀಸ್ ದೇಶದಲ್ಲಿ ಆದಂತೆ. ಸರಕಾರದ ಸೌಲಭ್ಯವೊಂದು ಆರ್ಥಿಕವಾಗಿ ದುಡಿದು ಮೇಲೇಳಲು ಸಹಾಯ ಮಾಡಬೇಕೇ ವಿನಃ ಬಡವರಿಗೆ ಹಣವನ್ನು ಹಂಚುವುದರಿಂದಲ್ಲ, ಉಚಿತವಾಗಿ ಸಿಕ್ಕ ಹಣದ ಬೆಲೆ ನಮಗೆಲ್ಲ ಗೊತ್ತು. ಬಡವ ಹೀಗೆ ಸಿಕ್ಕ ಹಣವನ್ನು ಖರ್ಚುಮಾಡಿ ಬಡವನಾಗಿಯೇ ಇರುವ ಸಾಧ್ಯತೆಯೇ ಹೆಚ್ಚು, ಇದು ಮನುಷ್ಯ ಸಹಜ ಗುಣ ಕೂಡ. ನಾವು ಉಚಿತವಾಗಿ ದುಡಿಯದೆ ಬಂದ ಹಣವನ್ನು ಬಂದ ವೇಗದಲ್ಲಿಯೇ ಕಳೆದುಕೊಳ್ಳುವುದೇ ಹೆಚ್ಚು, ಒಂದು ವರದಿಯ ಪ್ರಕಾರ ದೊಡ್ಡ ಮೊತ್ತದ ಲಾಟರಿ ಹೊಡೆದ ಶೇ.77 ಜನ ಸುಮಾರು ಐದು ವರ್ಷದಲ್ಲಿ ದಿವಾಳಿಯಾಗುತ್ತಾರಂತೆ. ಹೀಗೆ ಸರಕಾರ ಕೊಡುವ ಹಣ ಕೂಡ ಲಾಟರಿ ಹಣದಂತಾಗುವ ಸಾಧ್ಯತೆಯೇ ಹೆಚ್ಚು ಮತ್ತು ಮಾನವ ಸಂಪನ್ಮೂಲವನ್ನು ಕ್ರಮೇಣ ನಿಷ್ಪ್ರಯೋಜಕಗೊಳಿಸುತ್ತದೆ. ಅದರ ಬದಲಿಗೆ ಇಂದಿನ ದಿನದಲ್ಲಿ ಕೈಗಾರಿಕೆಗಳನ್ನು, ಮೂಲ ಸೌಕರ್ಯ ಬೆಳೆಸಿದರೆ ಅದು ಒಂದು ಶಾಶ್ವತ ಪರಿಹಾರಕ್ಕೆ ದಾರಿಮಾಡಿಕೊಡಬಲ್ಲುದು. ಪುಕ್ಕಟ್ಟೆ ಹಣ ಹಂಚಿ ಸಮಾಜದಲ್ಲಿ ಸಮತೋಲನವನ್ನು ತರುತ್ತೇವೆ ಎಂಬುದು ಭ್ರಮೆ, ಮೋಸ. ದೇಶದ ಬೆಳವಣಿಗೆಗೆ ಉತ್ತಮ ಮೂಲ ಸೌಕರ್ಯದ ಅವಶ್ಯಕತೆಯಿರುತ್ತದೆ ಮತ್ತು ಅದನ್ನೂ ಒದಗಿಸಲು ಸರಕಾರಕ್ಕೆ ಹಣ ಬೇಕಾಗುತ್ತದೆ. ಈ ಉಚಿತ ಹಣವನ್ನು ಹಂಚುವ ಕೆಲಸದಿಂದ ಬಡವ ಬಡವನಾಗಿರುವುದಲ್ಲದೇ ಸರಕಾರದ ಹಣ ಕೂಡ ಖರ್ಚಾಗಿ ದೇಶದ ಬೆಳವಣಿಗೆಗೆ ಹೊಡೆತ ಬೀಳುತ್ತದೆ.

ಈಗ ವಿಷಯ ಇರೋದು ರಾಜ್ಯ(ಗಳು) ಇಂತಹ ಕೆಲಸಕ್ಕೆ ಇಳಿದರೆ ಎಂದು. ಈಗಂತೂ ಜಿಎಸ್‌ಟಿ ಬಂದಾಗಿನಿಂದ, ಅದು ಸಾಕಷ್ಟು ವ್ಯವಸ್ಥಿತವಾಗಿರುವುದರಿಂದ ತೆರಿಗೆ ತಪ್ಪಿಸಿಕೊಳ್ಳುವುದು ಕಷ್ಟ. ಇದರಿಂದ ಮತ್ತು ಡಿಜಿಟೈಸೇಶನ್ ನಿಂದ ಈಗ ತೆರಿಗೆ ಸಾಕಷ್ಟು ಪ್ರಮಾಣದಲ್ಲಿ ಸರಕಾರವನ್ನು ಸೇರುತ್ತಿದೆ. ತೆರಿಗೆ ಸೋರಿಕೆಯ ಪ್ರಮಾಣ ತಗ್ಗಿದೆ. ಜಿಎಸ್‌ಟಿ ತೆರಿಗೆ ಕೇಂದ್ರಕ್ಕೆ ಹೋಗಿ ನಂತರದಲ್ಲಿ ಅದು ರಾಜ್ಯದ ಪಾಲಿಗೆ ಹಂಚಿಕೆಯಾಗುತ್ತದೆ. ಕೇಂದ್ರಕ್ಕೆ ಅದರದೇ ಆದ ಖರ್ಚುಗಳಿವೆ. ಆ ಖರ್ಚುಗಳು ಕೂಡ ದೇಶದ ಭಾಗವಾದ ರಾಜ್ಯಕ್ಕೆ ಪರೋಕ್ಷವಾಗಿ ಹಂಚಿಕೆಯಾಗುತ್ತದೆ. ಕೇಂದ್ರವೇನು ರಾಜ್ಯಕ್ಕೆ ಹೊರತಾದ ವ್ಯವಸ್ಥೆಯಲ್ಲ, ದೇಶ ಕಟ್ಟುವ ಕೆಲಸ ಕೇಂದ್ರದ್ದಷ್ಟೇ ಅಲ್ಲ, ಬದಲಿಗೆ ರಾಜ್ಯಗಳೆಲ್ಲದರದ್ದೂ ಆಗಿರುತ್ತದೆ. ಗಣರಾಜ್ಯವೆನ್ನುವುದು ಉತ್ಸವ ಮಾಡಲಿಕ್ಕಿರುವ ವಿಷಯವಷ್ಟೇ ಅಲ್ಲವಲ್ಲ, ಒಟ್ಟಾರೆ ರಾಜ್ಯವೊಂದು ಅದರದೇ ಆದ ಇತಿಮಿತಿಯಲ್ಲಿ ಖರ್ಚುಮಾಡಬೇಕು. ಸರಕಾರದ ಖರ್ಚು ಜನರ ಮೇಲೆ ಮಾಡುವ ಹೂಡಿಕೆಯಾಗಿರಬೇಕು. ಆ ಖರ್ಚನ್ನು ಮೀರಿದಾಗ, ಇದ್ದ ಹಣವನ್ನು ಹೀಗೆ ಬಳಸಿದಾಗ ಅಲ್ಲಿ ಅಭಿವೃದ್ಧಿಗೆ ಕೊರತೆಯಾಗುವುದು ಖಂಡಿತ. ಇಂಥದ್ದೆಲ್ಲ ಮಾಡಿ ಕೇಂದ್ರ ಹೆಚ್ಚಿನ ಹಣ ಕೊಡಲಿಲ್ಲವೆಂದು ರಾಜಕೀಯ ಮಾಡುತ್ತ ಅಳುವುದು ಮಾರ್ಗವಲ್ಲ.

ಈಗ ಇದೆಲ್ಲದಕ್ಕೆ ಹಣ ಹೊಂದಿಸಲು ಒಂದೋ ಕೇಂದ್ರ ಇನ್ನಷ್ಟು ಹಣ ಭರಿಸಿಕೊಡಬೇಕು, ಇಲ್ಲವೇ ಅಭಿವೃದ್ಧಿ ಅವಶ್ಯ ಕಾಮಗಾರಿಗಳಿಗೆ ಬಳಸುವ ಹಣ ತಗ್ಗಿಸಿ ನಿಭಾಯಿಸಬೇಕು. ರಾಜ್ಯ ಸರಕಾರಕ್ಕೆ ಹಣ ಪ್ರಿಂಟ್ ಮಾಡುವುದಕ್ಕಂತೂ ಸಾಧ್ಯವಿಲ್ಲ? ಇರುವ ಹಣವನ್ನೇ ಹೊಂದಿಸಲೇಬೇಕು, ಇನ್ನೆಲ್ಲಿಯದೋ ಕೊರತೆಯನ್ನು ಮರೆಮಾಚಬೇಕು. ಇದು ಬಿಟ್ಟು ಇನ್ನೆಲ್ಲವೂ ವಿತಂಡವಾದ. ಮೂಲ ಸೌಕರ್ಯ, ಶಿಕ್ಷಣ, ಆರೋಗ್ಯ ವ್ಯವಸ್ಥೆ, ರಸ್ತೆ ಇವೆಲ್ಲದಕ್ಕಿಂತ ಕಿಸೆಗಿಳಿಯುವ ಪುಡಿಗಾಸು ಚೊಲೋ ಎಂದರೆ ಸರಿ.

ಈ ಪುಕ್ಕಟ್ಟೆ ಭಾಗ್ಯಗಳಿಂದ ನಾಗರಿಕರನ್ನು ಅನುತ್ಪಾದಕರನ್ನಾಗಿಸುವ, ಆ ಮೂಲಕ ಚುನಾವಣೆಯನ್ನು ಗೆಲ್ಲಬಹುದೆನ್ನುವ ವಿಚಾರ ಮಾದರಿಯಾಗಿ ಇನ್ನಷ್ಟು ರಾಜ್ಯಕ್ಕೆ ಹರಡಿದರೆ, ಅದನ್ನು ಉಳಿದ ರಾಜಕೀಯ ಪಕ್ಷಗಳೂ ಪಾಲಿಸಲು ಮುಂದಾದರೆ ಏನಾಗಬಹುದು? ಹೆಚ್ಚೆಂದರೆ ನಾವು ಗ್ರೀಸ್ ಆಗಬಹುದು. ಅಷ್ಟೆ, ಮತ್ತೇನಾಗಲಿಕ್ಕಿಲ್ಲ ಬಿಡಿ. ಈಗ ಮಾತಿಗೆ ತಪ್ಪುವಂತಿಲ್ಲ.

ತಿಲಕರ ಮಗ ಆತ್ಮಹತ್ಯೆ ಮಾಡಿಕೊಂಡ ಕ್ಷಣ!



ಬುಲೆಟ್ ಪ್ರೂಫ್

ವಿನಯ್ ಖಾನ್

vveditoped@gmail.com

ಈ ಪತ್ರ ನಿಮ್ಮ ಕೈಸೇರುವ ಮುಂಚೆಯೇ, ನಾನು ಈ ಪ್ರಪಂಚ ಬಿಟ್ಟು ಹೋಗಿರುವ ಸುದ್ದಿ ನಿಮಗೆ ತಿಳಿದಿರುತ್ತೆ. ನಿಮ್ಮ 'ಸಮಾಜ-ಸಮತ-ಸಂಘ'ದ ಕೆಲಸಗಳು ಮತ್ತಷ್ಟು ಹೆಚ್ಚಾಗಬೇಕಾಗಿದ್ದರೆ, ವಿದ್ಯಾವಂತ ಮತ್ತು ಸಾಮಾಜಿಕ ಕಳಕಳಿಯುಳ್ಳ ಯುವಕರು ಈ ಚಳವಳಿಯಲ್ಲಿ ಪಾಲ್ಗೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ನಿಮ್ಮ ನಿರಂತರ ಪ್ರಯತ್ನ ನೋಡುತ್ತಿದ್ದರೆ, ದೇವರೇ ಯಶಸ್ಸನ್ನು ಆಶೀರ್ವದಿಸುತ್ತಾನೆ ಎಂಬ ಬಲವಾದ ನಂಬಿಕೆ ನನ್ನಲ್ಲಿದೆ. ಮಹಾರಾಷ್ಟ್ರದ ಯುವಕರೆಲ್ಲರೂ ಈ ಪುಣ್ಯಕೆಲಸದಲ್ಲಿ ಕೈಜೋಡಿಸಿದರೆ, ಮುಂದಿನ ಐದು ವರ್ಷಗಳಲ್ಲಿ ಎಂಥದ್ದೇ ಅಸ್ಪೃಶ್ಯತೆಯ ಸಮಸ್ಯೆಯೂ ನಿರ್ನಾಮವಾಗಬಹುದು. ಎಲ್ಲ ನನ್ನ ಅಸ್ಪೃಶ್ಯ ಬಂಧುಗಳ ಕುಂದುಕೊರತೆಗಳನ್ನು ಹೇಳಲು ಕೃಷ್ಣನೆಡೆಗೆ ಹೊರಟಿದ್ದೇನೆ. ನನ್ನ ಎಲ್ಲ ಸ್ನೇಹಿತರಿಗೂ ದಯವಿಟ್ಟು ನನ್ನ ವಂದನೆಗಳನ್ನು ತಿಳಿಸಿ.- ವಂದನೆಗಳೊಂದಿಗೆ, ನಿಮ್ಮ ಶ್ರೀಧರ್ ಬಲವಂತ್ ಪಂತ್ ತಿಲಕ್.

ಬಾಲಗಂಗಾಧರ ತಿಲಕ್ ಅವರ ಮಗ ಶ್ರೀಧರ್ ಪಂತ್ ಅವರು ಆತ್ಮ ಹತ್ಯೆ ಮಾಡಿಕೊಳ್ಳುವ ಮುನ್ನ ಡಾ. ಬಿ.ಆರ್. ಅಂಬೇಡ್ಕರ್ ಅವರಿಗೆ ಈ ಪತ್ರ ಬರೆದಿದ್ದರು.

★★★

ಆಗಿನ್ನೂ ದೇಶಾದ್ಯಂತ ಸ್ವಾತಂತ್ರ್ಯದ ಕಹಳೆ ಮೊಳಗಿತ್ತಷ್ಟೇ. ಎಲ್ಲೆಲ್ಲೂ ದೇಶಭಕ್ತಿಯ ಮಾತುಗಳೇ. ಹಾಗೆಯೇ ಸಾಮಾಜಿಕ ನ್ಯಾಯದ ಜಾಗೃತಿಯೂ ಹಲವರಲ್ಲಿ ಮೂಡಿತ್ತು. ಹಲವೆಡೆ ಸಾಮಾಜಿಕ ನ್ಯಾಯ, ದಲಿತರ ಏಳ್ಗೆಯ ಪರವಾದ ಮಾತುಗಳೂ ಕೇಳಿಬರುತ್ತಿದ್ದವು. ಮಹಾತ್ಮ ಗಾಂಧಿಯವರೂ 'ಹರಿಜನರ ಸೇವೆ' ಎಂಬ ಹೊಸ ಕಲ್ಪನೆಯನ್ನು ಹುಟ್ಟುಹಾಕಿದ್ದರು. ಆಗಿನ್ನೂ ಮುನ್ನೆಲೆಗೆ ಬಂದಿದ್ದ ಅಂಬೇಡ್ಕರ್, ತಮ್ಮ ಸಮುದಾಯದ ಜನರ ಶ್ರೇಯೋಭಿಲಾಷೆಗಳಿಗೆ ಹೋರಾಟ, ಸಂಘಟನೆಗಳನ್ನು ಮಾಡುತ್ತಿದ್ದರು.

ಅದರ ಭಾಗವಾಗಿಯೇ, 1927ರಲ್ಲಿ ನಡೆಯುತ್ತಿದ್ದ 'ಮಹಾಡ್ ಸತ್ಯಾಗ್ರಹ'ದ ಸಮಯದಲ್ಲಿ, ದಲಿತ ಚಳವಳಿಗೋಸ್ಕರ ಅದನ್ನು ಬೆಂಬಲಿಸುತ್ತಿದ್ದ ಹಲವಾರು ಮೇಲ್ಜಾತಿ ಜನರ ಮಿತ್ರಕೂಟವನ್ನು ಸ್ಥಾಪಿಸಿ, ಅದಕ್ಕೆ 'ಸಮಾಜ ಸಮತ ಸಂಘ' ಅಂತ ಹೆಸರನ್ನೂ ಇಟ್ಟಿದ್ದರು. ಅದರ ಸದಸ್ಯರಾಗಿ ಹುಟ್ಟಾ ಬ್ರಾಹ್ಮಣ ಕುಟುಂಬದ ಶ್ರೀಧರಪಂತ್ ತಿಲಕ್ ಅವರೂ ಇದ್ದರು. ಅದರ ಒಂದು ಶಾಖೆಯನ್ನೇ ಶ್ರೀಧರ್ ಪಂತ್ ಪುಣೆಯ ಗಾಯಕ್‌ವಾಡಾದಲ್ಲಿ ಸ್ಥಾಪಿಸಿದಾಗ ಸಾಮಾನ್ಯವಾಗಿಯೇ ಕರ್ಮಠವಾದಿಗಳ ವಿರೋಧ ಹುಟ್ಟಿತ್ತು. ಅದಾದ ಮೇಲೆ ತಮ್ಮ ಮನೆಯೊಳಗೆ ದಲಿತರನ್ನೂ ಬಿಟ್ಟುಕೊಳ್ಳುತ್ತಿದ್ದರು. 'ಲೋಕಮಾನ್ಯ ನಿವಾಸ್'ಆಗಿದ್ದ ಅವರ ಮನೆಗೆ 'ಚಾತುರ್ವಣ್ಯ ವಿಧ್ವಾಂಸಕ್ ಸಮಿತಿ' ಅಂತ ಬೋರ್ಡ್ ಅನ್ನೂ ಹಾಕಿದ್ದರು. ಈ ವಿಷಯವಂತೂ ಕೇಸರಿ ಟ್ರಸ್ಟ್‌ನ ಟ್ರಸ್ಟಿಗಳಲ್ಲಿ ಅಸಮಾನ್ಯ ವಿರೋಧ ಹುಟ್ಟಿಸಿತ್ತು. ಅದರ ಟ್ರಸ್ಟಿಗಳಾಗಿದ್ದಂತಹ ಎನ್.ಸಿ.ಕೇಳ್ಕರ್ ಮತ್ತು ಜಿ.ವಿ. ಕೇಟ್ಕರ್ ಅವರ ಪಾಲಿಗಂತೂ ಶ್ರೀಧರ್ ಪಂತರ ಹೊಸ ನಿಲುವುಗಳು ಚೇಳು ಬಿಟ್ಟಂತಾಗಿತ್ತು. ಅಪ್ಪಟ ಕರ್ಮಠರಾಗಿದ್ದಂತಹ ತಿಲಕರ ಮಗನ ಚಿಂತನೆಗಳೆಲ್ಲ ಬೂಟಾಟಿಕೆಯಾಗಿಯೂ ಹಲವರಲ್ಲಿ ಕಾಣಿಸಲು ಶುರುವಾಯಿತು.

ಪರಿಸ್ಥಿತಿ ಇಷ್ಟೊಂದು ಹದೆಗೆಟ್ಟಿದ್ದಾಗಲೇ, ಮೇ10, 1928ರಲ್ಲಿ ಪುಣೆಯ ನಾರಾಯಣ ಪೇಠದ ಗಾಯಕ್‌ವಾಡಾದಲ್ಲಿ ವಾಸವಾಗಿದ್ದ ತಿಲಕ್ ಕುಟುಂಬದವರು ಅಂದು ಸ್ವಲ್ಪ ಬೇಗವೇ ಎದ್ದು ತಮ್ಮ ದಿನಚರಿಯನ್ನು ಪ್ರಾರಂಭಿಸಿದ್ದರು. ಅವರ ಮನೆಯಲ್ಲೆಲ್ಲ ಅಂದು ಹಬ್ಬದ ಸಡಗರ, ಬೆಳಗ್ಗೆಯೇ ಎದ್ದು ಮನೆಯಲ್ಲ ಗುಡಿಸಿ, ರಂಗೋಲಿ ಹಾಕಿ, ಅಡುಗೆ ಸಿದ್ಧಪಡಿಸಿಕೊಳ್ಳುತ್ತಿದ್ದುದು, 200ಕ್ಕೂ ಅಧಿಕ ಬೇರೆ ಬೇರೆ ಜಾತಿಯ ಮಂದಿಯೆಲ್ಲ ಅವರ ಮನೆಗೆ 'ಸಹಭೋಜನ'ಕ್ಕೆ ಬರುತ್ತಿದ್ದ ಸಡಗರಕ್ಕೆ. ಆ ಕಾರ್ಯಕ್ರಮದ ಮೇಲುಸ್ತುವಾರಿಯಾಗಿ, ಮುಂದೆ ನಿಂತು ಕೆಲಸ ನೋಡಿಕೊಳ್ಳುತ್ತಿದ್ದುದು, ಶ್ರೀಧರ್ ಪಂತ್ ತಿಲಕ್. ಪಕ್ಕಾ ಸಾಂಪ್ರದಾಯಿಕ ವಾಡೆಯಲ್ಲಿ ನಡೆಯುತ್ತಿದ್ದ ಈ ಕಾರ್ಯಕ್ರಮವನ್ನು ಯಶಸ್ವಿ ಮಾಡಬೇಕು, ಅದರಿಂದ ದೇಶದೆಲ್ಲೆಡೆ ಸಾಮಾಜಿಕ ನ್ಯಾಯದ ಪರವಾದ ಮತ್ತಷ್ಟು ಕೂಗು ಕೇಳಿಬರುತ್ತದೆಂದು ಶ್ರೀಧರ್ ಅವರು ಉತ್ಸುಕರಾಗಿದ್ದರು.



ಆ ಕಾರ್ಯಕ್ರಮದ ಮತ್ತೊಂದು ಕೇಂದ್ರ ಬಿಂದುವಾಗಿದ್ದುದು, ವಿಶ್ವದ ಅತ್ಯಂತ ಯಶಸ್ವಿ, ಜ್ಞಾನಿ ಹಾಗೆಯೇ ಸಾಮಾಜಿಕ ಹೋರಾಟಗಾರ ಹಾಗೂ ಶ್ರೀಧರನ ಅತ್ಯಂತ ಆತ್ಮೀಯ ಸ್ನೇಹಿತರಾಗಿದ್ದ ಡಾ.ಭೀಮರಾವ್ ಅಂಬೇಡ್ಕರ್ ಅವರ ಬರುವಿಕೆಯೂ ಆ ದಿನ ಶ್ರೀಧರಪಂತರಲ್ಲಿ ಹೊಸದೊಂದು ಸಂತೋಷವನ್ನು ತಂದಿತ್ತು.

1925ರಿಂದಲೇ ಡಾ.ಅಂಬೇಡ್ಕರ್ ಅವರ ವಿಚಾರ, ಸಾಮಾಜಿಕ ಹೋರಾಟಗಳಿಂದ ಸ್ಫೂರ್ತಿ ಹೊಂದಿದ್ದ ಶ್ರೀಧರ್, ಅಂಬೇಡ್ಕರ್‌ರನ್ನು ಆಗಾಗ ಭೇಟಿ ಆಗುತ್ತಿದ್ದರು. ಅವರಿಗೆ ಬರೀ ಜಾತಿ ನಿರ್ಮೂಲನೆ, ಮೇಲ್ವರ್ಗದವರ ಬೂಟಾಟಿಕೆಗಳ ವಿರುದ್ಧ ಹೋರಾಡುವುದಷ್ಟೇ ಅಲ್ಲದೇ; ಬಾಲ್ಯ ವಿವಾಹ, ವಿಧವೆಯರೆಡೆಗೆ ನಡೆಯುತ್ತಿದ್ದ ಹಲವಾರು ದುಷ್ಕೃತ್ಯಗಳನ್ನು ತಡೆಯುವುದೂ ಅವರ ಉದ್ದೇಶವಾಗಿತ್ತು, ಶ್ರೀಧರ ಪಂತರ ಪ್ರತಿಯೊಂದು ಸಾಮಾಜಿಕ ಕಾರ್ಯಗಳ ಉದ್ದಗಲಕ್ಕೂ ಹಿಂದೆ ದೊಡ್ಡ ಶಕ್ತಿಯಾಗಿ ನಿಂತಿದ್ದ ಸ್ನೇಹಿತರೆಂದರೆ ಪ್ರಬೋಧಂಕರ್ ಕೇಶವ್ ಸೀತಾರಾಂ ಠಾಕ್ರೆ ಹಾಗೂ ಬಾಬಾಸಾಹೇಬ್ ಅಂಬೇಡ್ಕರ್.

ಮೊದಲೇ ಕರ್ಮಠವಾದಿಗಳೆಲ್ಲ ತಿಲಕ್‌ರ ವಿರುದ್ಧ ಹಲವಾರು ಕೆಟ್ಟ ವದಂತಿಗಳು ಹೆಚ್ಚಾದವು. ಸಹಭೋಜನದ ವಿಷಯ ಕೇಳುತ್ತಲೇ ಶ್ರೀಧರ್ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಬಗ್ಗೆಯೂ ಎಚ್ಚರಿಸಲಾಯಿತು. ಅದರೆ, ಅದ್ಯಾವುದೂ ತಿಲಕರನ್ನು ಸುಮ್ಮನೇ ಕೂರಿಸಲಿಲ್ಲ. ಬಾಲ್ ಗಂಗಾಧರ ತಿಲಕರು ಸ್ಥಾಪಿಸಿದ್ದ 'ಕೇಸರಿ' ಪತ್ರಿಕೆಯ ಮೇಲೂ ಹತ ಸಾಧಿಸಿದ ಟ್ರಸ್ಟಿಗಳು, ಪತ್ರಿಕೆಯಿಂದ ತಿಲಕರನ್ನು ಓಡಿಸಿದರು. ಆ ಸಮಯದಲ್ಲಿ ಶ್ರೀಧರ್‌ಪಂತರ ಸ್ನೇಹಿತ-ಹಿತೈಷಿಗಳು ಅವರ ತತ್ವ ಸಿದ್ಧಾಂಗಳನ್ನು ಬಿಟ್ಟು ಜೀವನಕ್ಕೆ ಹಾದಿ ಆಗಿದ್ದ ಪತ್ರಿಕೆಯನ್ನು ಉಳಿಕೊಳ್ಳುವ ಸಲಹೆ ನೀಡಿದರು, ಆದರೆ, ತಿಲಕ್‌ರ ಛಲ ಅದ್ಯಾವುದಕ್ಕೂ ಬಗ್ಗಲಿಲ್ಲ.

ದಲಿತರನ್ನ ಅವಹೇಳನ ಮಾಡಲು ಮೇಲ್ಜಾತಿಯವರು ಉಪಯೋಗಿಸುತ್ತಿದ್ದ ಅತಿದೊಡ್ಡ ಅಸ್ತ್ರವೇ ಊಟ. ಆಗಿನ ಕಾಲದಲ್ಲಿ (ಈಗಲೂ ಕೆಲವು ಕಡೆಗಳಲ್ಲಿ) ಮೇಲ್ಜಾತಿಯವರ ಪಂಕ್ತಿ, ಅಥವಾ ಅವರ ಪಕ್ಕ ಕೂತು ದಲಿತರು ಊಟ ಮಾಡುವುದಂತೂ ಭಾರೀ ನಿಷೇಧಕ್ಕೆ ಒಳಪಟ್ಟಿತ್ತು. ನಮಗೆಲ್ಲ ಗೊತ್ತಿರುವ ಹಾಗೆ, ದಲಿತರಿಗೆ ಕುಡಿಯುವ ನೀರಿನ ಬಳಕೆಗೂ ಕಟ್ಟಳೆಗಳಿದ್ದವು, ಅದನ್ನು ಅಂಬೇಡ್ಕರ್ ಸಹ ನುಭವಿಸಿದ್ದರು. ತಮ್ಮ ಶಾಲೆಯಲ್ಲಿ, ಊರಿನಲ್ಲಿ, ಇನ್ನೂ ಮುಂದೆ ಹೋಗಿ ಇಂಗ್ಲೆಂಡ್‌ನಲ್ಲಿ ಪಿ.ಎಚ್‌ಡಿ ಮಾಡುವಾಗ, ಬರೋಡಾ ಪ್ರಾಂತದ ದಿವಾನರಾಗಿದ್ದರೂ ವಡೋದರಾದಲ್ಲಿ ಇರೋಕೆ ಮನೆ ಸಿಗದಿದ್ದಾಗ, ಕಚೇರಿಯಲ್ಲಿ ಕೆಳಸ್ತರದ ಅಧಿಕಾರಿಗಳಾಗಿದ್ದರೂ, ಜಾತಿಯಲ್ಲಿ ಮೇಲ್ವರ್ಗದವರಾಗಿದ್ದರಿಂದ ಮುಟ್ಟಿಸಿಕೊಳ್ಳದಿದ್ದ ಸನ್ನಿವೇಶದಲ್ಲಿ, ಕೊನೆಗೆ ಜವಾನನಿಂದಲೂ ಸರಿಯಾದ ಮರ್ಯಾದೆ ಸಿಗದೆ ಬೇಸತ್ತು ಹೋಗಿದ್ದರು. ಹೀಗೆ ಯಾರಿಂದಲೂ ಮುಟ್ಟಿಸಿಕೊಳ್ಳದ ಸಂದರ್ಭದ ದಿನಗಳಲ್ಲಿ ಅವರ ಜತೆಸೇರಿ, ಶ್ರೀಧರ್‌ಪಂತ್ ಅವರು ತುಳಿದಿದ್ದ ಹಾದಿಯಂತೂ ಸಣ್ಣದ್ದಾಗಿರಲಿಲ್ಲ.

ಮೇ 10, 1928 ರಂದು ಸಹಭೋಜನದ ದಿನ, ಕೇಸರಿ ಟ್ರಸ್ಟ್‌ನ ಟ್ರಸ್ಟಿಗಳು ಅಂಬೇಡ್ಕರ್ ಬರುವ ಸಮಯದಲ್ಲೇ ಗಾಯಕ್‌ವಾಡಾದ ಕರೆಂಟ್ ತೆಗೆದರು. ಸಣ್ಣ ಗದ್ದಲವನ್ನೂ ಮಾಡಿದರು, ಆಗ ಶ್ರೀಧರ್ ಪಂತರು ತಮ್ಮ ಸ್ನೇಹಿತರ ಸಹಾಯದಿಂದ ಮನೆಯಲ್ಲಿದ್ದ ದೀಪ, ಮೊಂಬತ್ತಿಗಳನ್ನು ತರಿಸುತ್ತಾರೆ. ಕೆಲವೇ ಹೊತ್ತಿಗೆ ಆ ಸ್ಥಳ ನೂರಾರು ಜನ ತಮ್ಮ ಮನೆಗಳಿಂದ ತಂದ ದೀಪಗಳಿಂದ ಕೂಡಿ ದೀಪಾವಳಿಯ ವೈಭವವನ್ನು ತರುತ್ತದೆ. ಸಹ ಭೋಜನ ಕೂಡ ಅಚ್ಚುಕಟ್ಟಾಗಿಯೇ ಮುಗಿಯುತ್ತದೆ.

ಅದಾದ ಮೇಲೆ, ಶ್ರೀಧರ್ ಪಂತ್ ಅವರ ಮೇಲೆ ಕರ್ಮಠರಿಂದ ಮತ್ತಷ್ಟೂ ವ್ಯಾಪಕವಾಗಿ ವಿರೋಧ. ಇದೇ ಕಾರಣಕ್ಕೆ ಶತ್ರುಗಳೂ ಹುಟ್ಟುತ್ತಾರೆ. ಅವರ ಮೇಲಿದ್ದ ಕೇಸ್‌ಗಳೂ ಮತ್ತಷ್ಟೂ ಪ್ರಬಲವಾಗುತ್ತವೆ. ಅವರು ಹೋದಲ್ಲಿ, ಬಂದಲ್ಲೆಲ್ಲ ಅವರನ್ನು ಅವಮಾನ ಮಾಡಲಾಗುತ್ತದೆ. ಅವರದ್ದೇ ಆದ 'ಕೇಸರಿ' ಪತ್ರಿಕೆಯಲ್ಲಿಯೂ ಅವರನ್ನು ಅವಹೇಳನ ಮಾಡಲಾಗುತ್ತೆ. ಪುಣೆಯ ಬ್ರಾಹ್ಮಣರು ಮತ್ತು ಕರ್ಮಠವಾದಿಗಳೆಲ್ಲ ಶ್ರೀಧರ್‌ಪಂತ್ ಮತ್ತವರ ಸ್ನೇಹಿತರನ್ನು 'ದುಷ್ಟರ ಕೂಟ' ಎಂದೂ ಕರೆಯುತ್ತಾರೆ. ಪ್ರತಿಯೊಂದೂ ನಡೆಯಲ್ಲೂ ವಿರೋಧ ಕಟ್ಟಿಕೊಂಡು, ಅವಹೇಳನ ಮಾಡಿಸಿಕೊಂಡು ಖಿನ್ನರಾಗಿದ್ದ ಶ್ರೀಧರ್ ಪಂತ್ ತಿಲಕ್, ಮೇ25,1928 ರಂದು ಬಾಂಬೆ-ಪೂನಾ ಎಕ್ಸ್‌ಪ್ರೆಸ್ ಟ್ರೈನ್‌ಗೆ ತಲೆಕೊಟ್ಟು ತಮ್ಮ ಪ್ರಾಣವನ್ನೇ ಬಿಡುತ್ತಾರೆ.

ಎಷ್ಟೋ ಸಲ ಸಾರ್ವಕಾಲಿಕ ದಲಿತ ನಾಯಕರೆಂದಾಗ ಅಂಬೇಡ್ಕರ್ ಅವರು ಹೆಸರು ಬರುವುದು ಸಾಮಾನ್ಯ. ಇತ್ತೀಚಿನ ದಿನಗಳಲ್ಲಿ ದಲಿತ ನಾಯಕನ ಹೆಸರು ಕೇಳಿದಾಗ ಹಲವು ರಾಜಕೀಯ ನಾಯಕರು (ಹೆಸರಿಂದಷ್ಟೇ ದಲಿತ ಎನ್ನಿಸಿಕೊಳ್ಳುವ) ಮುಂದೆ ಬರುತ್ತಾರೆ. ಆದರೆ, ಎಲೆಮರಿ ಕಾಯಿಯಾಗಿ ಹಲವಾರು ಚಳವಳಿಯನ್ನು ಸಂಘಟಿಸಿ, ತಮ್ಮ ಜೀವನವನ್ನೇ ಒತ್ತೆಯಿಟ್ಟು, ಸವೆಸಿಕೊಂಡಂತಹ ಹಲವಾರು ಜನ ಇತಿಹಾಸದಲ್ಲಿ ಇನ್ನೂ ಇದ್ದಾರೆ. ಏನನ್ನೋ ಓದುವಾಗ ಇವರ ಬಗ್ಗೆ ಗೊತ್ತಾಗಿ, ಬರೆಯಬೇಕಿನಿಸಿತು.

ಹಾಂ, ನಿನ್ನೆಗೆ ಅವರು ತೀರಿಕೊಂಡು 95 ವರ್ಷಗಳಾದವು.

ಒದುಗರ ಒಣಿ

ಒದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಅನಾವಶ್ಯಕ ಖರ್ಚು ಏಕೆ?

ಚುನಾವಣೆಯಲ್ಲಿ ಗೆದ್ದುಬಂದ ಸಿದ್ದು, ಇನ್ನು ಮುಂದೆ ತನಗೆ ಯಾರೂ ಹಾರ, ತುರಾಯಿ, ಶಾಲುಗಳ ಸನ್ಮಾನ ಮಾಡಿ ಅನಾವಶ್ಯಕ ಖರ್ಚು ಮಾಡುವುದು ಬೇಡ ಅಂದಿದ್ದಾರೆ. ಇದು ನಿಜಕ್ಕೂ ಸ್ವಾಗತಾರ್ಹ. ಆದರೆ, ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಬೆನ್ನಲ್ಲೇ ಹಗಲೆಲ್ಲ ದಿಲ್ಲಿ ಪ್ರವಾಸ ಮಾಡುತ್ತಿರುವುದು ಅನಾವಶ್ಯಕ ಖರ್ಚಲ್ಲವೆ ? ಇದನ್ನು ತಡೆಯಲು ಬರುವುದಿಲ್ಲವೆ ? ಚಿಕ್ಕ-ಚಿಕ್ಕ ವಿಷಯಗಳನ್ನೂ ಚರ್ಚಿಸುವ ನೆಪದಿಂದ, ಹೈಕಮಾಂಡ್ ಬುಲಾವ್ ಬಂದಿದೆಯೆಂದು ವಿಶೇಷ ವಿಮಾನದಲ್ಲಿ ತೆರಳಿ, ಏನೂ ಇತ್ಯರ್ಥವಾಗದೇ, ಮತ್ತೆ ವಾಪಸ್, ಮರುದಿನ ತಿರುಗಿ ದಿಲ್ಲಿ ಭೇಟಿ ಇವೆಲ್ಲ ಅನಾವಶ್ಯಕ ಖರ್ಚಲ್ಲವೇ? ಆಡಳಿತ, ಅಧಿಕಾರ ಅಂದಮೇಲೆ ಇವೆಲ್ಲ ಸಹಜ ಅಂದುಕೊಂಡು ಸುಮ್ಮನಿರಬೇಕೆ? ದೂರವಾಣಿಯಲ್ಲಿ ಇತ್ಯರ್ಥವಾಗುವಂತಹುದನ್ನೂ ದಿಲ್ಲಿಗೆ ಹೋಗೇ ಪರಿಹರಿಸಿಕೊಳ್ಳಬೇಕೆ? ಇಲ್ಲಿ ಜನರ ದುಡ್ಡು ವ್ಯರ್ಥವಲ್ಲವೆ? ಅದನ್ನೇ ಇನ್ನಾವುದೋ ಅಭಿವೃದ್ಧಿ ಕೆಲಸಕ್ಕೆ ಬಳಸಿಕೊಳ್ಳಬಹುದಲ್ಲವೇ? ಇದೇನು ಸಣ್ಣ ಮೊತ್ತವಲ್ಲ. ಸರಕಾರಿ ಮಟ್ಟದಲ್ಲಿ ಇಂತಹ ಅನೇಕ ಅನಾವಶ್ಯಕ ಖರ್ಚುಗಳು ನಡೆಯುತ್ತಲೇ ಇದ್ದರೂ ಯಾರೂ ಅದರ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಈ ಹಣ ಎಲ್ಲಿಂದ ಬರುತ್ತದೆ ? ರಾಜ್ಯದ ಬೊಕ್ಕಸದಿಂದಲೇ ಅಲ್ಲವೇ? ಇವುಗಳಿಗೆಲ್ಲ ಕಡಿವಾಣ ಬೀಳಲೇಬೇಕಲ್ಲವೇ? ಈಗಂತೂ, ಸಿದ್ದು ಮತ್ತು ಡಿಕೆಶಿ, ಒಬ್ಬರಿಗಿಂತ ಇನ್ನೊಬ್ಬರು ಮೊದಲೇ ದಿಲ್ಲಿಯತ್ತದೌಡಾಯಿಸುತ್ತಲೇ ಇದ್ದಾರೆ. ಇನ್ನೂ ಸಂಪುಟ ರಚನೆಯೂ ಆಗಿಲ್ಲ, ಆಗಲೇ ಶುರು ಒಬ್ಬರ ಮೇಲೆ ಇನ್ನೊಬ್ಬರ ದೂರು. ಈ ದೂರು ಕೊಡಲೂ ವಿಮಾನದಲ್ಲೇ ಪ್ರಯಾಣ! ಒಂದೊಮ್ಮೆ ಇದಕ್ಕೂ ಮಿತಿ ಇಟ್ಟು, ಆ ಮಿತಿ ತಪ್ಪಿದರೆ, ಸ್ವಂತ ಖರ್ಚಿನಲ್ಲೇ ಪ್ರಯಾಣ ಮಾಡಬೇಕೆಂಬ ಕಾನೂನು ಬಂದರೆ ತಪ್ಪೇ? ಇದು ವ್ಯವಸ್ಥೆಯನ್ನೂ ಸರಿಪಡಿಸಿ, ಅನಾವಶ್ಯಕ ಖರ್ಚನ್ನೂ ಕಡಿತಗೊಳಿಸಲು ಸಹಾಯಕಾರಿ.

-**ಶಂಕರನಾರಾಯಣ ಭಟ್ ಮಾಡಗೇರಿ** ಹೊನ್ನಾವರ

ಕೊಡಲಿಕಾವು ಮರಕ್ಕೆ ಶತ್ರು

ಮರದ ಒಂದು ಭಾಗವಾದ ಕೊಡಲಿಯ ಕಾವು ಮರವನ್ನೇ ಕಡಿಯುವಲ್ಲಿ ಮಹತ್ತರ ಪಾತ್ರ ವಹಿಸಿದಂತೆ ಬಿಜೆಪಿಯ ನಿಷ್ಠಾವಂತ ಕಾರ್ಯಕರ್ತನಾಗಿ ಪಕ್ಷ ಕಟ್ಟುವಲ್ಲಿ ಮಹತ್ತರ ಪಾತ್ರ ವಹಿಸಿದ ಸಜ್ಜನ ಹಿರಿಯ ರಾಜಕಾರಣಿ ಶೆಟ್ಟರ್ ನಡೆಯೂ ಕೂಡ ಕಾಂಗ್ರೆಸಿಗೆ ಕಾವೇ ಆದಂತಿದೆ. ಅವರನ್ನು ಉಪಯೋಗಿಸಿಕೊಂಡು ಅದು ರಾಜ್ಯ ಚುನಾವಣೆಯಲ್ಲಿ ಕೆಲವು ಸ್ಥಾನ ಗೆದ್ದಿತು. ಇನ್ನು ಲೋಕಸಭೆ ಚುನಾವಣೆಯಲ್ಲಿ ಅವರನ್ನು ಉಪಯೋಗಿಸಿಕೊಂಡು ಕೆಲವು ಸ್ಥಾನ ಗೆಲ್ಲಲು ಸನ್ನದ್ದವಾಗಿರುವ ಅದರ ಲೆಕ್ಕಾಚಾರ ನೋಡಿದರೆ 'ಕೊಡಲಿ ಕಾವು ಮರಕ್ಕೆ ಶತ್ರು' ಎನ್ನುವ ಗಾದೆ ಮಾತಿನ ಆಳ ಅಗಲ ಎಷ್ಟು ಪ್ರಸ್ತುತ ಎಂದು ವೇದ್ಯವಾಗುತ್ತದೆ.

-**ಸತ್ಯಬೋಧ** ಬೆಂಗಳೂರು

ಒದುಗರ ಒಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು